# ರಾಘವೇಂದ್ರ ಪಾಟೀಲರ 'ತೇರು' ಪರಂಪರೆ ಮತ್ತು ಆಧುನಿಕತೆ

*ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪ್ರವೇಶ**

ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯಲ್ಲಿ ಬದಲಾಗುತ್ತಿರುವ ಬದುಕಿನ ಹೊಸ ಆಶಯಗಳನ್ನು ಒಳಗೊಂಡ ಅನುಭವಗಳು ಸತ್ಯವನ್ನು ಕಂಡುಕೊಳ್ಳಲು ತೊಡಗಿದ ವಿಧಾನವನ್ನು ಈ ಕಾದಂಬರಿಯಲಿ ಆಧುನಿಕತೆಗಳ ನಡುವೆ ಸಂಘರ್ಷವೇ ಏರ್ಪಡುತ್ತದೆ. ಪರಂಪರೆಯಿಂದ ನಡೆದುಕೊಂಡು ಬಂದ ರಕ್ತ ತಿಲಕದ ಸೇವೆಯನ್ನು ಹೊಸತಲೆಮರಿನ ಆಧುನಿಕ ದ್ಯಾವಪ್ಪನು ಅದನ್ನು ವಿರೋಧಿಸುತ್ತಾನೆ. ಹೀಗೆಬದಲಾವನೆಗಳು ಮನುಷ್ಯನಲ್ಲಿ ಮೂಡಿಬರುತ್ತವೆ. ಆಧುನಕತೆಯ ಪ್ರಭಾವವು ಎಷ್ಟರ ಮಟ್ಟಿಗೆ ಒಳ್ಳೆಯದು ಕೆಟ್ಟದ್ದು ಎಂಬುದು ಕಾದಂಬರಿಗಳನ್ನು ಅಭ್ಯಸಿಸಿದಾಗ ವ್ಯಕ್ತವಾಗುವಂತಹ ಸಂಗತಿಯಾಗಿದೆ. ಪರಂಪರಾಗತ ಸಾಮಾಜಿಕ ವ್ಯವಸ್ಥೆ ಆಧುನಿಕತೆಯ ಮೌಲ್ಯಗಳಿಗೆ ಮುಖಾಮುಖಿಯಾದಾಗ ಸ್ಥಿತ್ಯಂತರಗೊಳ್ಳುವ ಕ್ರಮವು ತೇರು ಕಾದಂಬರಿಯಲ್ಲಿ ಕಂಡು ಬರುವುದು. ಒಟ್ಟಾರೆಯಾಗಿ 'ತೇರು' ಕಾದಂಬರಿಯ ಪರಂಪರೆ ಮತ್ತು ಆಧುನಿಕತೆಯ ಪ್ರಧಾನ ಕಾಳಜಿಯಾಗಿ ಕಥನವನ್ನು ಒಳಗೊಂಡಿದೆ. ರಾಘವೇಂದ್ರ ಪಾಟೀಲರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟಿರುವ 'ತೇರು' ಕಾದಂಬರಿ (2003) ಅವರ ಸಾಹಿತ್ಯದ ಬಹುಮುಖ್ಯ ಸೃಷ್ಟಿಗಳಲ್ಲಿ ಮಹತ್ವದ ಮೈಲುಗಲ್ಲಾಗಿದೆ. ಇಂದು ದೇಶದ ಸ್ಥಿತಿ ಮತ್ತು ಅಸ್ಮಿತೆಯನ್ನು ತಿಳಿದುಕೊಳ್ಳಲು ಕಾಲದ ಅರಿವಿನ ಔಚಿತ್ಯವು ಪ್ರಧಾನವಾಗಿದೆ. ಜಾಗತೀಕರಣದ ಎದುರು ದೇಶಿಯತೆ ಅಸ್ಮಿತೆಯನ್ನು ಉಳಿಸಿಕೊಳ್ಳಲು ಇಂದು ಕನ್ನಡ ಸಾಹಿತ್ಯ ಮತ್ತು ಕನ್ನಡಿಗರು ಹೋರಾಡಬೇಕಾಗಿದೆ. ಪರಂಪರೆ ಮತ್ತು ಆಧುನಿಕತೆಗಳನ್ನು ವರ್ತಮಾನ ಮತ್ತು ಭೂತಕಾಲಗಳ ಜೊತೆಗೆ ಸಾಗುವ ಪಯಣದೊಂದಿಗೆ 'ತೇರು' ಕಾದಂಬರಿಯು ಮುಖಾಮುಖಿಯಾಗಿ ನಿಲ್ಲುತ್ತದೆ. ದಂತೆ ಮನುಷ್ಯನು ಬದಲಾಗುತ್ತಾ ಹೊಸ ಹೊಸ ಆಲೋಚನೆಗಳಿಂದ ತನ್ನ ಜೀವನವನ್ನು ಸುಮವಾದ ಹಾದಿಯಲ್ಲಿ ತರಲು ಪ್ರಯತ್ನಿಸುತ್ತಾನೆ. ಪಾರಂಪರಿಕ ಆಚಾರ ವಿಚಾರಗಳನ್ನು ವೇಷಭೂಷಗಳನ್ನು ಅಳಿಸಿ ಹಾಕುತ್ತಾ ಇಂದು ಆಧುನಿಕತೆಯು ತನ್ನದೇ ಆದಂತಹ ಪದ್ಧತಿಗಳನ್ನು ಅಳವಡಿಸಿಕೊಂಡು ಮುಂದೆ ಸಾಗುತ್ತಿದೆ. "ಪ್ರತಿಯೊಂದು ಜನಾಂಗದಲ್ಲಿ ಹಳೆಯ ಮತ್ತು ಹೊಸದರ ನಡುವೆ ದ್ವಂದ್ವ ಇದ್ದೇ ಇರುತ್ತದೆ. ಇಂದು ನಾವು ನಿರಾಕರಿಸಿದ್ದನ್ನೇ ನಾಳೆ ಉಪದೇಶಿಸುತ್ತೇವೆ. ಇಂದು ಹಳೆದಾಗಿರುವುದು ನಿನ್ನೆಗೆ ಹೊಸದಾಗಿರುತ್ತದೆ. ಇಂದು ಹೊಸದಾಗಿರುವುದು ನಾಳೆಗೆ ಹಳೆಯದಾಗುತ್ತದೆ. ಇದು ಸಹಜ.

ಉಳ್ಳವರು ಇಲ್ಲದವರನ್ನು ಹೇಗೆ ಬಲಿಪಶುಮಾಡುತ್ತಾರೆ. ಎನ್ನುವುದು ಕಾದಂಬರಿಯಲ್ಲಿ ಪ್ರತಿಪಾದಿತವಾಗಿದೆ. ಶ್ರೀಮಂತವರ್ಗವು ಬಡವರನ್ನು ಆಸೆ ಆಮಿಷಕ್ಕೆ ಒಳಪಡಿಸಿ ಅವರಿಗೆ ತಮ್ಮ ಸ್ವಾರ್ಥವೇ ಮುಂದೆ ಪದ್ಧತಿಯಾಗುವಂತೆ ಪ್ರೇರೇಪಿಸುತ್ತಾರೆ. ರಕ್ತತಿಲಕದ ಸೇವೆಯನನು ವಿರೋಧಿಸಿ ದೇವರುಗಳೆಲ್ಲ ಕಲ್ಲು ಮೂರ್ತಿಗಳಾಗಿವೆ ಎಂದು ಧರ್ಮಧ ಅಲೌಕಿಕ ಪಾವಿತ್ರ್ಯದಲ್ಲಿ ನಂಬಿಕೆಯನು ಕಳೆದುಕೊಂಡು 'ಬಾಬಾ ಆಮ್ಟೆ'ಯವರ ಆಶ್ರಮವನ್ನು ಸೇರಿ ಸಮಾಜಕ್ಕೆ ಒಳಿತಾಗುವ ಕೆಲಸದಲ್ಲಿ ಆಧುನಿಕ ದ್ಯಾವಪ್ಪ ಭಾಗವಹಿಸುತ್ತಾನೆ. 'ತೇರು' ಕಾದಂಬರಿ ಪರಂಪರೆ ಮತ್ತು ಆಧುನಿಕತೆಗಳ ನಡುವೆ ಸಂಘರ್ಷವನ್ನು ಏರ್ಪಡಿಸುತ್ತದೆ ಎಂದು ಹೇಳಬಹುದು. ಆಧುನಿಕ ದ್ಯಾವಪ್ಪನಿಗೆ ಯಾವುದೇ ಆಧುನಿಕ ಪ್ರಚೋದನೆ ಈ ಕಾದಂಬರಿಯಲ್ಲಿ ಕಂಡು ಬಂದಿಲ್ಲ. ಇದು ಆತನ ಸ್ವಂತಹದ ಪ್ರಚೋದನೆ ಇದು ಪರಂಪರೆ ಆಧುನಿಕತೆಯ ಸರಳೀಕೃತವಾದ ಕಲ್ಪನೆಗಳನ್ನು ಮೂಡಿಸುತ್ತದೆ. ಆಧುನಿಕ ದ್ಯಾವಪ್ಪ ನವನಿರ್ಮಾಣ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿ ಅಲ್ಲಿಂದ ಬಿಡುಗಡೆಗೊಂಡ ನಂತರ ನೇರವಾಗಿ ಬೆಂಗಳೂರಿನ ಪತ್ರಕರ್ತ ಪಾಟೀಲರ ಮನೆಗೆ ಹೋಗುತ್ತಾನೆ. ಅಲ್ಲಿ ಪಾಟೀಲರ ಮತ್ತು ಆಧುನಿಕ ದ್ಯಾವಪ್ಪನ ನಡುವಿನ ಸಂಭಾಷಣೆಯಿಂದ ಪರಂಪರೆಯನ್ನು ಎಷ್ಟು ವಿರೋಧಿಸುತ್ತಾನೆ ಎನ್ನುವುದು ಗೊತ್ತಾಗುತ್ತದೆ. ಇತ್ತೀಚಿನ ಹೊಸ ವ್ಯವಸ್ಥೆಗಳು ಸೃಷ್ಠಿ ಮಾಡಿರುವ ಸಮಸ್ಯೆಗಳ ಕುರಿತು ಅವನಲ್ಲಿ ಬೇಸರವು ಇದೆ. ಏಕೆಂದರೆ ಸ್ವತಃ ಆತನು ತೊಂದರೆಯನ್ನು ಅನುಭವಿಸಿದ್ದಾನೆ. 'ಇದ ವ್ಯವಸ್ಥಾ ಏರೀ ಸಾಹೇಬರ... ಇದು ಹೆಂತಾ ವ್ಯವಸ್ಥಾರೀ? ಇಲ್ಲಿ ನೋಡರಿ ಈ ಬೆಂಗಳೂರಿನ್ಯಾಗ ಎಲ್ಲಾ ಕಡೆ ಝಗ–ಮಗ ಬೆಳಕು ಚೆಲ್ಯಾಡಿ ಹಾದೀಗುಂಟ ಹರೀತೈತಿ... ಇಡೀ ಊರಿಗೆ ಊರ ಚಲಸಾಕತ್ತೈಅನ್ನೋ ಹಂಗ ರಸ್ತದ ತುಂಬಾ ಬಸ್ಸೊ–ಕಾರಗಡೀ ಮತ್ತು ಮೋಟರ ಸೈಕಲ್‌ಗೋಳು ಭರಂಡೀ ಹೋಗತಾವು...ಅಲ್ಲಿ ನಮ್ಮ ಊರಗೋಳೊಳಗ ನಿಮಗೆ ಗೊತ್ತ ಐತೆಲ್ಲರೀ...ಅಲ್ಲಿ ಕತ್ತಲ್ಲಿ ತುಂಬೈತಿ... ಚಿಮಣೀ ಬುಡ್ಡಿಗೆ ತಟಕ ಎಣ್ಣಿ ಸಿಗೊದುಲ್ಲ... ಇಡೀ ಊರಿಗೆ ಊರ ಕುಂಟ ಬಿದ್ದದಾವು..." ಎಂದು ಆಧುನಿಕ ದ್ಯಾವಪ್ಪನ ಈ ಮಾತುಗಳನ್ನು

ನೋಡಿದಾಗ ಆಧುನಿಕತೆಯು ಕೇವಲ ಪಟ್ಟಣಗಳಿಗೆ ಮಾತ್ರ ಸೀಮಿತವಾದಂತೆ ಕಾಣುತ್ತದೆ. ಹಳ್ಳಿಯಲ್ಲಿಯ ವ್ಯವಸ್ಥೆಯನ್ನು ಸುಧಾರಿಸದೇ ಇರುವುದು ಕಂಡು ಬರುತ್ತದೆ. ಹಿಂದಿನ ಕಾಲದಲ್ಲಿ ತಮ್ಮ ಮುತ್ತಜ್ಜಗೋಳಿಗೆ ಕೊಟ್ಟಿದ್ದ ಎಂಟೆಕರೆ ಜಮೀನನ್ನು ಈ ಆಧುನಿಕ ದ್ಯಾವಪ್ಪನ ಕಾಲಕ್ಕೆ ಅದನ್ನು ಗೌಡ ವಾಪಸ್ಸು ತೆಗೆದುಕೊಂಡು ತನ್ನ ಮಗನ ಹೆಸರಿಗೆ ಮಾಡಿದ. ಇದರಿಂದ ಆಧುನಿಕ ದ್ಯಾವಪ್ಪನಿಗೆ ಪರಂಪರೆಯಿಂದ ಬಂದ ಆಚರಣೆ, ನಂಬಿಕೆಗಳನ್ನು ಅಲ್ಲಗಳೆಯತೊಡಗಿದ. ಊರಿನ ಶ್ರೀಮಂತವರ್ಗದವರು ಬಡವರನ್ನು ಹೇಗೆ ತಮ್ಮ ಆಸೆ ಆಮಿಷಗಳಿಗೆ ಬಲಿಪಶು ಮಾಡಿಕೊಳ್ಳುತ್ತಿದ್ದರು ಎನ್ನುವುದನ್ನು ಆಧುನಿಕ ದ್ಯಾವಪ್ಪ ಕಂಡುಕೊಂಡ.

ತೊಗಲುಗೊಂಬೆಗಳ ಪೆಟ್ಟಿಗೆ ಹೊತಗೊಂಡು ಊರೂರು ತಿರುಗಾಡಿ ಹೊಟ್ಟೆ ತುಂಬಿಸಿಕೊಲ್ಲುವ ಕಾಯಕ ಮಾಡ್ರಿ ಎಂದು ಊರಿನ ಗೌಡರು ಹೇಳಿದ್ದನ್ನು ಆಧುನಿಕ ದ್ಯಾವಪ್ಪ ಪಾಟೀಲರಿಗೆ ಹೇಳುವಾಗ ಅವನಲ್ಲಿ ಮೇಲ್ವರ್ಗದ ಆಧುನಿಕ ಜನರ ಬಗ್ಗೆ ಜಿಗುಪ್ಸೆ ಇರುವುದನ್ನು ನೋಡಬಹುದು. "ಈ ಹೊಲ ನೆಂಬಿಕೊಂಡರ ಹೊಟ್ಟಿಗೆ ಕ್ಯಾರಾಹಾಕೋಬೇಕಗತೈತಿ ನೋಡು ಅಂತ ನಮ್ಮ ಅಜ್ಜಗೋಳಿಗೆ ಈ ಗೌಡನ ಅಜ್ಜಗೋಳು ಹೇಳಿದರಂತೆ... ಅಂದಿನಿಂದನ ಬಲಿ ಏಯಾಕತ್ತಿದ್ದವರು... ನಮ್ಮ ಅಜ್ಜಗೋಳು ಹಚಪ್ಯಾಲಿಗೋಳು ಇದ್ದಿರಬೇಕು...! ಗೌಡರು ಹೇಳಿದ್ದು ಅಗದೀ ವಾಜಮಿಯ ಮಾತು ಅಂತ ಜೋಳಿಗೀ ಕಟಿಗೊಂಡು, ತೊಗಲಿನ ಗೊಂಬಿಗೋಳ ಪೆಟಿಗೀ ಹೊತಗೊಂಡು ಊರೂರು ಅಡ್ಯಾಡಿ ರಾಮಾಯಣಾ ಮಹಾಭಾರತಗೋಳನ ಕಥೀ ಹಿಡದು ಎಳಕೊಂಡು ರಾಜಸಭಾಕ್ಕ ದ್ರೋಪದಿಯ ಜಡೀ ಹಿಡದು ಎಳಕೊಂಡು ರಾಜಸಭಾಕ್ಕ ತಂದದ್ದನ್ನ-ದುರ್ಯೋಧನ ಧರ್ಮರಾಜಗ ನೀ ಸ್ವಂತ ಅಪ್ಪಗ ಹುಟ್ಟಿದ ಮಗಾ ಅಲ್ಲಾ... ನಿನಗೆ ಒಂದು ಇಂಚು ಸೈತ ಜಾಗಾ ಕೊಡೂದುಲ್ಲ ಹೋಗಲೇ... ನೀಯೆನ ನಮ್ಮ ಕುಲದ ಸಂತಾನ ಅಲ್ಲ ಅಂತ ಜಡಸಿ ಒಕ್ಕೋಟ್ಟದ್ದನ್ನ ಕಥೀ ಮಡಿ ಹೇಳುವಷ್ಟೊತ್ತಿಗೆ ಇವರ ಹೊಲಾನ ಹೋತ! ಅತ್ತ ತೊಗಲ ಗೊಂಬಿಗೋಳೂ ಹೋದು ಇತ್ತ ಹೊಲಾನೂ ಹೋತು..." ಊಳಿಗಮಾನ್ಯ ಸಾಮಾಜಿಕ ಸಂದರ್ಭದ ಯಜಮಾನ ಕೇಂದ್ರಗಳು ವರ್ತಮನದಲ್ಲಾಗುವ ಸನ್ನಿವೇಶಗಳನ್ನು ನಿರಾಕರಿಸಿ ತಮ್ಮದೇ ಆದ ಸ್ವಾರ್ಥಕ್ಕೆ ಬಡೆದಾಡುತ್ತೆ. ಭೂತಕಾಲದಲ್ಲಿ ತಮ್ಮ ವಂಶಜರಿಗೆ ಕೊಟ್ಟು ಹೊಲವನ್ನು ಕಸಿದುಕೊಂಡದ್ದು ಪಾಟೀಲರ ಮುಂದೆ ದ್ಯಾವಪ್ಪ ಧರಮನಟ್ಟಿಯ ತೇರಿನ ವಿಷಯವಾಗಿ ಹೇಳುವಾಗಿ ಅಲ್ಲಿ ಆಕಸ್ಮಿಕವಾಗಿ ಪುರಾತನದ ಕತೆಗೆ ವರ್ತಮಾನದಲ್ಲಿ ಬದಲಾವಣೆ ಸಿಗುವುದು ಆಧುನಿಕ ದ್ಯಾವಪ್ಪನ ಕಾಲದಲಿ ಕಂಡು ಬಂದಿರುವುದನ್ನು ಗಮನಿಸಬಹುದು. ಹೀಗೆ ಆಧುನಿಕ ದ್ಯಾವಪ್ಪನ ಮೂಲಕ ಒಂದು ಹೊಸ ಬದಲಾವಣೆಯನ್ನು ಕಾದಂಬರಿ ಕಂಡುಕೊಳ್ಳುತ್ತದೆ.

ರಕ್ತ ತಿಲಕದ ಸೇವೆಗೆಂದು ಹಲವಾರು ಕ್ಷೇತ್ರಗಳಿಗೆ ಹೋಗಿ ಅಲ್ಲಿ ದರ್ಶನ ತಗೊಂಡು ನಂತರ ಧರಮನಟ್ಟಿಗೆ ಹೋದಾಗ ಅಲ್ಲಿನ ಭಕ್ತರು ಮೊದಲು ಇವರಿಗೆ ಕಾಳು ಕಡಿಗಳನ್ನು ಕೊಡುತ್ತಿದ್ದರು. ಆದರೆ ಈಗ ಯಾರೂ ಏನು ಕೊಡುವುದಿಲ್ಲ "ನಮ್ಮ ಅಜ್ಜಗೋಳು ವಿಠ್ಠಲನ ಭಕ್ತರು ಕೊಟ್ಟದ್ದನ್ನು ಚಕಡ್ಯಾಗ ಹೇರಿಕೊಂಡು ಬರುತ್ತಿದ್ದರೂ ಅಂತ ನಮ್ಮ ಅಪ್ಪ ಹೇಳುತ್ತಿದ್ದ... ಆಗ ಕೊಡವರು ಅದನ್ನು ಭಕ್ತಿ ಅಂತ ಕೊಡುತ್ತಿದ್ದರು ಮತ್ತು ಸಲಗೋಳಾವರ ಅದನ್ನು ಭಿಕ್ಷಾ ಅಂತ ಅನಕೋತಿದ್ದಿಲ್ಲ... ಮುಂದ ಕೊಡವರಿಗೆ ಅದು ಭಿಕ್ಷಾ ಅಂತ ತಿಳೀತು... ಕೊಡೊದನ್ನ ಬಂದ್ ಮಾಡಿದರು... ನಮ್ಮ ಅಪ್ಪನ ಕಾಲದಾಗ ಯಾವ ಭಕ್ತರೂ ಏನ ಒಂದು ನಯ್ಯಾ ಪೈಸಾ ಕೊಡತಿದ್ದಿಲ್ಲರಿ... ಜ್ವಾಳಾ ಕಾಳನೂ ಇಲ್ಲ... ಕಾಡಿ ಬೇಡಿ ತಿರಕೊಮಡು ಉಂಬವನಿಗೆ ಕೈಯೆತ್ತಿ ಒಂದು ತುತ್ತು ನೀಡುವುದಿಲ್ಲ... ಹಂತಾದ್ದರಾಗ ಇನ್ನ ಇಲ್ಲದ ದೇವರ ಮ್ಯಾಲಿನ ಭಕ್ತಿಗೆ ಕೊಡಾಂವ ಯಾಂವರೀ...? ಈಗ ಮಂದಿಗೆ ದೇವರ ಖರೇ ಹಕೀಕತ್ತು ತಿಳದೈತಿ. ಹೀಮಗಾಗಿ ಕೊಡೊದು ಗಿಡೊದು ಬಂದ ಮಾಡ್ಯಾರು. ಅವರದೇನ ತಪ್ಪ ಅಲ್ಲರೀ... ದೇವರೊದಿಂಡರು ಎಲ್ಲಾ ಔಟ್ ಆಫ್ ಡೇಟ್ ಅಗ್ಯಾವರೀ...! ಔಷಧದ ಬಾಟಲಿ ಮ್ಯಾಗ ಹಾಕಿರತಾರ ನೋಡರಿ... ಎಕ್ಸ್‌ಪೈರೀ ಡೇಟು... ಹಂಗ! ದೇವರೂ ದಿಂಡರದೂ ಎಕ್ಸಪೈರೀ ಡೇಟು ಆಗಿ ಹೋಗೇತರಿ... ಹಿಂತಾ ದೇವರ ತೇರಿನ ಸೇವಾ ಮಡಿಕೋತ ನಿರುಪಯೋಗ ಆಗಿ ಹಾಳ ಆಗಲಿಕ್ಕ ಬಿಡದ ನಮ್ಮಂಥಾ ಹಡುಗೋರಿಗೆ ದುಡೀಲಿಕ್ಕೆ ಕೆಲಸಾ ಕೊಡಬೇಕರಿ... ಯುವಕ ದ್ಯಾವಪ್ಪ ದೇವರ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿರುವುದಷ್ಟೇ ಅಲ್ಲದೇ, ಹಿಂದೆ ಒಳ್ಳೆಯ ಮನಸ್ಸಿನ ಭಕ್ತರು ಭಕ್ತಿಯಿಂದ ಕಾಣಿಕೆಯನ್ನು (ದಕ್ಷಿಣೆ) ಕೊಡುತ್ತಿದ್ದರು. ಇವಾಗ ಅಂದರೆ ಆಧುನಿಕ ಸಂದರ್ಭದಲ್ಲಿ ಯಾರೂ ಏನು ಕೊಡುವುದಿಲ್ಲ ಎಂಬುದನ್ನು ತಿಳಿದವನಗಿದ್ದಾನೆ.

ಆಧುನಿಕ ದ್ಯಾವಪ್ಪನು ಮೂಲ ಮುತ್ಯಾ ಹಾಕಿಕೊಟ್ಟ ದಾರಿಯಲ್ಲೇ ಅತೀ ನಿಷ್ಠಾದಿಂದ ಸೇವೆಯನ್ನು ಮಾಡಿದ. ಆದರೆ ಬರಬರುತ್ತ ಆತನಲ್ಲಿ ಅದೆಲ್ಲ ವ್ಯರ್ಥ ಅನಿಸಿ ಬಿಟ್ಟುಬಿಟ್ಟ. "ಗೂಗಿ ಕೊಳ್ಳದಾಗ ಈಗ ಯಾವ ಸಿದ್ದರೂ ಕಾಣೂದುಲ್ಲ... ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರಿ... ನವಲ ತೀರ್ಥದಾದ ಗಂಗವ್ವ ಈಗ ಸೆಳವ ಕಳಕೊಂಡಾಳರಿ...ಅಕೀ ಕಾಲಗೋಳನ ಮುರದ್ದಾರ! ಮುನ್ನೋಳೀ ಹಂತೇಕೆ ನೀವು ನೋಡಬೇಕರೀ...

ನದೀ ಅಂಬುವ ಜಾಗಾದ ತುಂಬ ಆಪು ಬೆಳದು... ದರಿಗಟ್ಟಿ... ನೀರು ಕೊಳತೆ ನಾರತೈತಿ! ಪಂಚಲಿಂಗೇಶ್ವರನ ಗುಡಿಯ ಅಂಗಳಕ್ಕ ಹೋಗೋ ಹಾದೀಗುಂಟ ಏನ ದಾವ ಹೇಳ್ರೀ... ಬಾರಗೋಳೊ ಮತ್ತು ಶರೇದ ಅಂಗಡಿಗೋಳು...! ನಡ ನಡಕ ತೋರಣಾ ಕಟ್ಟಿರತಾರು...! ಮಾವಿನ

ಎಲಿಯ ತೋರಣ ಅಲ್ಲರೀ... ತಂಬಾಕಿನ ಪಟಾಕಿಗಳ ಸರಪಳಿ ತೂಗುಹಾಕಿದ ತೋರಣಾ! ... ತೆಲೀಮ್ಯಾಲೆ ಬದಾ ಬದಾ ಅಂತ ಬಿಸಿಲು ಸುರೀತಿದ್ದರ ನೆಳ್ಳಿಗಿಂತ ಯಾರದರೇ ಮನೀ ಕಟ್ಟಿಗೆ ಹೋದರ ಆ ನೀರು ಸಿಗೂದಲ್ಲರಿ... ಚಾದ ಅಂಗಡಿಗೆ ಹೋಗೋ ಅಂತ ಹೇಳತಾರ... ಅವರರ ಏನ ಮಾಡ್ಯಾರರೀ... ಎರಡ ಮೂರ ದಿನಕ್ಕೆ ಒಮ್ಮೆ ನಳಾ ಬಂದಾಗ ಅವರಿಗೆ ನೀರು.... ಮತ್ತು ಎಂದ ನಳಾ ಬಿಡತಾರೋ ಅಂತನ್ನೂ ಅಂಜಿಕೆ ಎಲ್ಲಾರಿಗೂ... ನಾ ರೆಡ ವರ್ಷ ಅಗದೀ ನಿಷ್ಠಾದಿಂದ ಅಗದೀ ಭಕ್ತಿಲಿಂದ ಯಾತ್ರಾ ಮಾಡದಿನರಿ... ಆದರ ಯಾವು ಒಂದ ದೇವಸ್ಥಾನದೊಳಗನೂ ಒಂದು ಕ್ಷೇತ್ರದಾಗಾದರೂ ದೇವರಿದ್ದಾನಂತ ಅನ್ನೊ ಭಾವನಾ ನನಗ ಬರಲಿಲ್ಲ ನೋಡ್ರಿ. ನನ್ನ ಹಂತೇಕ ಭಕ್ತೀ ಐತಿ–ರೊಕ್ಕ ಇಲ್ಲ ಅಂತ ದೇವಸ್ಥಾನಗೋಳಿಗೆ ಹೋದರ ಅಲ್ಲಿ ಪೂಜಾರಿಗೋಳು ಹೋಗೋ ಮಕಳೀ ಹೋಗು ಅಮತ ಚಂಡಮ್ಯಾಲ ಕೈಕೊಟಟು ಹೊರಗ ನುಗಸತಾರು.. ಗುಡೀ ಅನ್ನುವುದರೊಳಗ ದೇವರುಗಳೆಲ್ಲಾ ಕಲ್ಲ ಮೂರತಿ ಆಗಿ ಕುಂತಾವರೀ ಸಾಹೇಬರ...! ಹೀಗೆ ಆಧುನಿಕ ದ್ಯಾವಪನ ಒಮ್ಮೆ ಮನುಷ್ಯರನ್ನು ಬೈದರೆ ಮೊತ್ತೊಮ್ಮೆ ದೇವರನ್ನು ಬೈಯ್ದು ಮಗದೊಮ್ಮೆ ಮನುಷ್ಯರಿಗೆ ಕರುಣೆಯನ್ನು ತೋರಿಸುತ್ತಾನೆ. ಹಿಂದೆ ಅತ್ಯಮತ ಸರಳ ಮನಸ್ಸಿನ ಭಕ್ತರು ಶ್ರದ್ಧೆ ನಿಷ್ಠೆಯಿಂದ ನಡೆದುಕೊಂಡು ಬಂದ ಪವಿತ್ರ ಕ್ಷೇತ್ರಗಳು ಈಗ ಪವಿತ್ರವಾಗಿ ಉಳಿದಿಲ್ಲ ಎಂಬುದನ್ನು ಆಧುನಿಕ ದ್ಯಾವಪ್ಪ ತಿಳಿದವನಾಗಿದ್ದಾನೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾದವರು ಪರಂಪರೆಯನ್ನು ಅನುಸರಿಸಿ ನಡೆದುಕೊಂಡು ಹೋಗಬೇಕೆಂದರೂ ಅದರಲ್ಲಿದ್ದ ನಂಬಿಕೆ ಶ್ರದ್ಧೆಗಳೆಲ್ಲ ಢಾಂಬಿಕ ಎಂದೂ ಗೊತ್ತಾದಾಗ ಅವರು ಅದನ್ನು ವಿರೋಧಿಸುತ್ತಾ ಹೋಗುತ್ತಾರೆ.

ಆಧುನಿಕ ದ್ಯಾವಪ್ಪನಿಗೆ ಎಲ್ಲಿಯೂ ಆಧುನಿಕತೆಯ ಪ್ರಭಾವ ಕಂಡು ಬರದೇ ಇದ್ದರೂ ಆತನಲ್ಲಿ ಬಂಡಾಯ ಮನೋಭಾವ ಕಂಡು ಬರುತ್ತದೆ. ತಲೆಮಾರಿನಿಂದ ತಲೆಮಾರಿಗೆ ಬದುಕು ಬದಲಾವಣೆಯಾಗುತ್ತಾ ಹೋಗುತ್ತದೆ. ಮೊದಲ ತಲೆಮಾರಿನಲ್ಲಿ ರಕ್ತಿತಿಲಕದ ಸೇವೆಯನ್ನು ಅತೀ ಶ್ರದ್ಧೆ ಭಕ್ತಿಯಿಂದ ಮಾಡಿರುವ ದ್ಯಾವಪ್ಪ ಮುಂದೆ ಆತನ ವಂಶಜರು ಕಾಟಾಚಾರಕ್ಕಾಗಿ ಮಾಡಿರುವುದು ಕಂಡು ಬರುತ್ತದೆ. ನಂತರ ಕೊನೆಯ ತಲೆಮಾರಿನ ಆಧುನಿಕ ದ್ಯಾವಪ್ಪನು ತನ್ನ ಮುತ್ತಜ್ಜನಿಗೆ ಕೊಟ್ಟ ಹೊಲವನ್ನು ಊರಗೌಡ ಕಸಿದುಕೊಂಡ ನಂತರ ಧರಮನಟ್ಟಿ ತೇರಿನ ಸೇವೆಗೆ ಹೋಗಲು ದುಡ್ಡನ್ನು ನಿಗದಿಪಡಿಸುತ್ತಾನೆ. ಅದೇ ರೀತಿ ಆ ಊರಿನ ಮುಖಂಡರು ಅವನಿಗೆ ಹಣದ ವ್ಯವಸ್ಥೆಯನ್ನು ಮಾಡುತ್ತಾರೆ. ಆಧುನಿಕ ದ್ಯಾವಪ್ಪನಲ್ಲಿ ಸ್ವಾರ್ಥದ ಮನೋಭಾವ ಒಂದೆಡೆ ಇದ್ದರೆ ಇನ್ನೊಂದೆಡೆ ಆತನಲ್ಲ ಬಂಡಾಯದ ಹೋರಾಟ ಕಂಡುಬರುತ್ತದೆ. ಕೊನೆಗೆ ಈತ ದೇವರಲ್ಲಿ ನಂಬಿಕೆಯನ್ನು ಕಳೆದುಕೊಂಡು 'ದೇವರು ಎಲ್ಲಾ ಔಟ್ ಆಫ್ ಡೇಟ್ ಆಗ್ಯಾವರಿ' ಎನ್ನುವ ಮಾತಿನಲ್ಲಿ ಇಂದಿನ ಯುವ ಜನಾಂಗದವರಿಗಿದ್ದ ದೇವರ ಬಗೆಗಿನ ಮನೋಭಾವವನ್ನು ತಿಳಿಸುವಂತಿದೆ. ಆತ 'ಬಾಬಾ ಆಮ್ಟೆ'ಯವರ ಆಶ್ರಮವನ್ನು ಸೇರಿಕೊಂಡು ಸಮಾಜದಲ್ಲಿರುವ ದೀನದಲಿತರ ಸೇವೆಗಾಗಿ ತನ್ನ ಜೀವನವನ್ನು ಅಲ್ಲಿ ಮುಡುಪಾಗಿಡುತ್ತಾನೆ. ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯು ಪರಂಪರೆಯಿಂದ ರೂಢಿಸಿಕೊಂಡು ಬಂದ ಆಚಾರ ವಿಚಾರಗಳನ್ನು ಸಂಪ್ರದಾಯಗಳನ್ನು ಹೇಗೆ ಹೊಸ ತಲೆಮಾರಿನ ಜನಾಂಗ ಅದನ್ನು ವಿರೋಧಿಸುತ್ತ ಹೋಯಿತು ಎನ್ನುವುದನ್ನು ಇಲ್ಲಿ ಚಿತ್ರಿಸಿದ್ದಾರೆ. ಸಮಾಜದ ಹೊಸಬಗೆಯ ಚಲನೆ ವಿಘಟನೆಯನ್ನು ಕಾದಂಬರಿ ದಾಖಲಿಸುತ್ತದೆ. ಇಂದಿನ ಜಗತೀಕರಣದ ಪ್ರಭಾವಕ್ಕೆ ಯುವಜನಾಂಗ ಹಳೆಯದನ್ನು ವಿರೋಧಿಸುತ್ತದೆ ಎನ್ನುವುದಕ್ಕೆ 'ತೇರು' ಕಾದಂಬರಿಯು ಒಂದು ನಿದರ್ಶನವಾಗಿದೆ. ಆಧುನಿಕ ದ್ಯಾವಪ್ಪನು ಪರಂಪರೆ ಮೌಲ್ಯಗಳನ್ನು ಪ್ರಸ್ತಾವನೆ ಮಾಡುತ್ತಿದ್ದರು ಅಲ್ಲಿ ಆಧುನಿಕ ಶಿಕ್ಷಣವು ನೀಡಿರಬಹುದಾದ ಪ್ರೇರಣೆ ಹುಮ್ಮಸುಗಳ ಪ್ರಸ್ತಾವನೆಯೇ ಕಾದಂಬರಿಯಲ್ಲಿ ಕಂಡುಬರುವುದಿಲ್ಲ. ಅಧಿಕಾರದ ಮುಮದುವರಿಕೆಗಾಗಿ ಅಮಾಯಕ ಜನರನ್ನು ಹಿಂಸಿಸುವ ಕ್ರೌರ್ಯವು ಪರಂಪರೆ ಜಗತ್ತಿನಲ್ಲಿ ಕಂಡುಬರುತ್ತದೆ. 'ತೇರು ಎಳೆಯದಿದ್ದರೆ ದೇಸಗತಿ ಉಳೀದೀತುಹೆಂಗೋ' ಎಂಬ ಮಾತಿನಲ್ಲಿ ಧರ್ಮ ಮತ್ತು ಅಧಿಕಾರದ ಸಂಬಂಧವನ್ನು ಸೂಚಿಸುತ್ತದೆ. ಆಳುವ ವರ್ಗವು ಇಲ್ಲದವರನ್ನು, ದೀನದಲಿತರನ್ನು ಯಾವ ರೀತಿಯಾಗಿ ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಅವರನ್ನು ಬಲಿಪಶುಮಾಡುವುದು ಎಂಬುದು ಕಾದಂಬರಿಯಲ್ಲಿ ಕಂಡುಬರುತ್ತದೆ.

ಕಾದಂಬರಿಯ ಕೊನೆಗೆ ಆಧುನಿಕ ದ್ಯಾವಪ್ಪನು ಗೌಡರು, ಕುಲಕರ್ಣಿ, ರಾಜಕಾರಣ ಕೋರ್ಟ್ ವ್ಯವಸ್ಥೆಯ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಾನೆ. ಗೂಗಿಕೊಳ್ಳದಲ್ಲಿ ಸಿದ್ಧರಿಲ್ಲ. ನವಿಲು ತೀರ್ಥದಲ್ಲಿ ಆಪುಬೆಳೆದು, ನೀರು ಕೊಳೆತು ನಾರುತ್ತಿದೆ. ದೇವಸ್ಥಾನದ ದಾರಿಗುಂಟ ತಂಬಾಕು ಪಾಕೀಟಿನ ತೋರಣ ಕಂಡು ಬರುತ್ತವೆ ಎಂಬ ಹೊಸ ತಲೆಮರಿನ ದ್ಯಾವಪ್ಪನ ಮಾತು ಪರಂಪರೆಯ ಮೌಲ್ಯಜಗತ್ತು ಸ್ಥಗಿತಗೊಂಡಿದೆ ಎನ್ನುವುದನ್ನು ಸೂಚಿಸುವಂತಿದೆ. ಅಸ್ಪೃಶ್ಯನಾದ ದ್ಯಾವಪ್ಪನಲ್ಲಿ ಮಾತ್ರ ಪರಂಪರೆಯನ್ನು ಅಪಮೌಲೀಕರಿಸುವ ಮನೋಭಾವ ದ್ಯಾವಪ್ಪನಲ್ಲಿ ಕಂಡು ಬಂದರೂ ಅದನ್ನು ಆಧುನಿಕ ಶ್ರೀಮಂತ ವರ್ಗ ಒಪ್ಪಿಕೊಳ್ಳುವುದಿಲ್ಲ. ಆಧುನಿಕ ಧಮ್ವನ್ನು ಜಮೀನ್ದಾರಿಕೆಯ ವ್ಯವಸ್ಥೆಯ ಸಮರ್ಥನೆಗಾಗಿ ದೇಸಗತಿಯ ಜನರು ಕಟ್ಟಿಕೊಂಡು ಅದರ ಮುಂದುವರಿಕೆಯಾಗಿ ಮನುಷ್ಯರು ಬಲಿಯಾಗುತ್ತ ಹೋಗುವುದು ಅನಿವಾರ್ಯವಾಗಿ ರೂಢಿಸಿಕೊಳ್ಳುತ್ತಾರೆ.

ಕೊನೆಯಲ್ಲಿ ಆಧುನಿಕ ದ್ಯಾವಪ್ಪ ನೂರೈವತ್ತು ವರ್ಷ ಇತಿಹಾಸವಿರುವ ರಕ್ತ ತಿಲಕದ ಆಚರಣೆಗೆ ಧಕ್ಕೆ ತರುತ್ತಾನೆ. ಡೊಂಬರ ಹುಡುಗಿಯ ಜೊತೆ ಸೂಳೆಗಾರಿಕೆಯನ್ನು ಮಾಡುತ್ತಾನೆ ಎನ್ನುವ ಆರೋಪ ಆತನ ಮೇಲೆ ಬರುತ್ತದೆ. ಆದರೆ ಆತ ಅವಳಿಗೆ ಹೊಸ ಜೀವನವನ್ನು ಕಟ್ಟಿಕೊಡಲು ಬಯಸುವವನು. ಉದಗಟ್ಟಿಯ ದೇವತೆ ಅವರಿಬ್ಬರ ಮದುವೆಗೆ ಅಪ್ಪಣೆಯನ್ನು ಕೊಡುವುದಿಲ್ಲ. ಡೊಂಬರ ಮನೆಯವರ ಭಾವನೆಗಳಿಗೆ ಧಕ್ಕೆ ತಂದು ಮುದುವೆಗೆ ಮುಂದುವರಿಯಲಾರದ ಒಳ್ಳೆಯ ಮನಸ್ಸಿನವಾಗಿದ್ದಾನೆ. ಮದುವೆಹಾಗದಿದ್ದರೂ ಡೊಂಬರ ಹುಡುಗಿಗೆ ಮತ್ತು ಆಕೆಯ ಮಕ್ಕಳಿಗೆ ಚೆನ್ನಾಗಿ ನೋಡಿಕೊಳ್ಳುವ ದ್ಯಾವಪ್ಪನು ಧರ್ಮ, ಜಾತಿ ಪರಂಪರೆಯ ಕಟ್ಟಳೆಗಳಿಗೆ ನಿಲುಕಲಾರದ ಮಾನವೀಯತೆಯನ್ನು ತೋರಿಸಿದ ಒಳ್ಳೆಯ ಮನುಷ್ಯನಾಗಿ ಕಾದಂಬರಿಯಲ್ಲಿ ಕಂಡುಬಂದಿದ್ದಾನೆ. ಎಲ್ಲರ ದೃಷ್ಠಿಯಲ್ಲಿ ಕುಡುಕನಾಗಿರುವ ದ್ಯಾವಪ್ಪನಿಂದಲೇ ಆಸ್ಪೃಶ್ಯರ ದಿನದಲಿತರ ರಕ್ತದ ಹನಿಯಿಂದಲೇ ತಿಲಕವನ್ನಾಗಿಸಿಕೊಂಡು ಮುಂದುವರೆಯುವ ಧರಮನಟ್ಟಿ ತೇರಿಗೆ ನಿಲುಗಡೆ ಬಂದಿತು. ಯುವ ಜನಾಂಗದ ಮಾನವೀಯ ಮೌಲ್ಯಗಳ ಬಗ್ಗೆ ಕಾದಂಬರಿಯು ಕೊನೆಯಲ್ಲಿ ಸಹೃದಯರ ಗಮನವನ್ನು ಸೆಳೆಯುತ್ತದೆ. ಬದಲಗುತ್ತಿರುವ ಬದುಕಿನ ಹೊಸ ಆಶಯಗಳನ್ನು ಒಳಗೊಂಡ ಅನುಭವಗಳು ಸತ್ಯವನ್ನು ತಿಳಿದುಕೊಳ್ಳಲು ತೊಡಗಿದ ವಿಧಾನವನ್ನು 'ತೇರು' ಕಾದಂಬರಿಯಲ್ಲಿ ಆಧುನಿಕ ದ್ಯಾವಪ್ಪನ ಮೂಲಕ ಕಂಡುಕೊಳ್ಳಬಹುದು. ಜಾಗತೀಕರಣ ಕನ್ನಡದ ಪ್ರಾಚೀನ ಸಾಹಿತ್ಯದ ವಿಪುಲವಾದ ದಾಖಲೆಯೇ ಇದನ್ನು ಸಮರ್ಥಿಸುತ್ತದೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂದು, ಸರಳವಾಗಿ ಸಂಕ್ಷಿಪ್ತವಾಗಿ ವಿಂಗಡಿಸಿಕೊಂಡು ಗಮನಿಸುವಾಗ ಅದು ಬದಲದ ಸಾಹಿತ್ಯಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ತನ್ನೊಳಗಿನ ಶಕ್ತಿಯ ಜೊತೆ ಜೊತೆಗೆ ಇತರ ಭಾಷೆ. ಸಂಸ್ಕೃತಿಗಳಿಂದಲೂ ಅಗತ್ಯ ಬಿದ್ದಾಗಲೆಲ್ಲಾ. ಪ್ರೇರಣೆಯನ್ನು ಪ್ರಭಾವವನ್ನು ಪಡೆದುಕೊಂಡು ಸಾಹಿತ್ಯ ಸಮೃದ್ಧವಾಗಿ ಬೆಳೆದು ಬಂದಿದೆ. ಮಹಕಾವ್ಯದ, ಪಾಂಡಿತ್ಯದ ಕಾಲ ಮುಗಿದಾಗ, ಅನುಭಾವದ ಸಾಮಾನ್ಯರ ಕಾಲ. ಅನಂತರದಲ್ಲಿ ಸ್ವತಂತ್ರ ಕವಿ ಕಾವ್ಯದ ಕಾಲ ಎಂಬೆಲ್ಲಾ ವಿಂಗಡಣೆಗಳ ಅನಂತರ ಆಧುನಿಕ ಕನ್ನಡ ಸಾಹಿತ್ಯ ಏಕಕಾಲಕ್ಕೆ ವಸ್ತು, ವಿಷಯ, ಭಾಷೆ, ಅಭಿವ್ಯಕ್ತಿ ಮೊದಲಾದ ನೆಲೆಗಳಲ್ಲಿ ಗಂಭೀರವಾದ ಹುಡುಕಾಟಕ್ಕೆ ತೊಡಗಿಕೊಂಡಂತೆ ಕಾಣುತ್ತದೆ. ಅದ್ದರಿಂದ ಹತ್ತೊಂಬತ್ತು. ಇಪ್ಪತ್ತನೇ ಶತಮಾನದ ಕಾಲಘಟ್ಟ ಶೋಧನೆಯ ಮತ್ತು ಮುಂದುವರಿದ ಪ್ರಯೋಗದ ಕಲ. ಕವಿ ಮುದ್ದಣ್ಣನಿಂದಲೇ ಹೊಸಗನ್ನಡ ಸಾಹಿತ್ಯದ ಮೂಲವನ್ನು ಹೇಲುವ ಪ್ರಯತ್ನವು ನಮ್ಮಲ್ಲಿ ಚಾಲನೆಯಲ್ಲಿವೆ. ಅವನ ನಿಲುವುಗಳೊಂದಿಗೇ ಕಾವ್ಯ ಬದಲಗಬೇಕಾದ, ಬದಲಾಗಬಹುದಾದ ದಿಕ್ಕುದಸೆಗಳನ್ನು ಕುರಿತು ಗಂಭೀರ ಚಿಂತನೆಯು ಪ್ರಾರಂಭವಾಗುತ್ತದೆ. ಜೀವಂತ ಭಾಷೆಯ ಕಾವ್ಯ ಪರಂಪರೆ ಹೀಗೆ ದಿಢೀರನೆ ಬದಲಗುವುದಿಲ್ಲ. ಅದು ಸಾಮೂಹಿಕ ಪ್ರಯತ್ನದ ಫಲ. ಅದರ ಪ್ರೇರಕ ಮರಕ ಅಂಶಗಳು ನೂರಾರಿವೆ. ಇಂತಹ ಹಿನ್ನೆಲೆ ಮತ್ತು ನಿರೀಕ್ಷೆಯೊಂದಿಗೆ ಹೊಸಗನ್ನಡ ಕಾವ್ಯ ಪರಂಪರೆಯು ಪ್ರಾರಂಭಗೊಳ್ಳುತ್ತದೆ. ಅದು ತನ್ನ ಹೊಸತನಕ್ಕೆ ಮಾದರಿಯನ್ನು ಹುಡುಕುವ ಪ್ರಯತ್ನ ನಡೆಸಿದೆ ಮತ್ತು ಆ ನಿಟ್ಟಿನಲಿ ನಿರೀಕ್ಷೆ ಮೀರಿ ಯಶಸ್ಸನ್ನು ಸಾಧಿಸಿದೆ ಎನ್ನುವುದು ಗಮನಾರ್ಹ. ಹೀಗೆ ಪ್ರಾರಂಭವಾದ ಆಧುನಿಕ ಸಾಹಿತ್ಯದ ಮೊದಲ ಪ್ರಯತ್ನವನ್ನು ನವೋದಯವೆನ್ನುವ ಹೆಸರಿನಲ್ಲಿ ಗುರುತಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಸುಮಾರು ಎಂಟು ದಶಕಗಳಷ್ಟು ದೀರ್ಘವಾದ ಇತಿಹಾಸವಿದೆ. ಅದು ಕಾಲದ ದೇಶದ, ಪರಿಸರದ, ಪರಿಸ್ಥಿತಿ ಮತ್ತು ತುರ್ತಿಗೆ ಅನುಗುಣವಾಗಿ ಬದಲಗುತ್ತಾ ರೂಪಗೊಳ್ಳುತತಾ, ಬೆಳೆಯುತ್ತಾ ಬಂದಿದೆ. ಇದು ದಿಢೀರನೆ ಉಂಟಾಗುವ ಕಾರ್ಯವಲ್ಲ. ಒಂದು ಭಾಷೆಯ ಜೀವಂತಿಕೆಗೂ ಅದರಲ್ಲಿ ಉಂಟಾಗುವ ಬೆಳವಣೀಗೆಗಳಿಗೂ ಸಾಹಿತ್ಯದಲ್ಲಿ ಅವಿನಾಭಾವ ಸಂಬಂಧವಿರುತ್ತದೆ. ಸಾಹಿತ್ಯವಾದರೂ ಹಲವು ಹತ್ತು ಪ್ರೇರಣೆ, ಪ್ರಭಾವ, ಹಿನ್ನೆಲೆಗಳಿಂದ ಪ್ರಭಾವಿತವಾಗುವಂತಹದು. ಅದು ಏಕಕಾಲಕ್ಕೆ ಸಾಂಪತ್ರದಾಯಿಕತೆ ಮತ್ತು ಆಧುನಿಕತೆಯ ನಡುವೆ ತನ್ನ ಉಳಿವನ್ನು ಕುರಿತಂತೆ ಅನುಸಂಧಾನವನ್ನು ನಡೆಸುವಂತಹುದು. ಆದ್ದರಿಂದಲೇ ಇಷ್ಟೊಂದು ದೀರ್ಘವಾದ ಚರಿತ್ರೆಯು, ಸಾರ್ಥಕತೆಯು, ಹೊಸ ಬಗೆಯ ಅನ್ವೇಷಣೆಯು, ಜೀವಂತಿಕೆಯು ಕನ್ನಡ ಸಂಧರ್ಭದಲ್ಲಿ ಅನನ್ಯವೆನ್ನುವಂತೆ ಉಳಿದುಕೊಂಡಿದೆ.

ಸಾಹಿತ್ಯ ಎನ್ನುವುದಕ್ಕೆ ಒಂದು ನಿರ್ದಿಷ್ಟವಾದ ಅರ್ಥವನ್ನು ಇದುವೆಗೂ ನೀಡಲಾಗಿಲ್ಲ ಆ ಕುರಿತ ಚರ್ಚೆ ನಿರಂತರವಾಗಿ ನಡೆದೇ ಇದೆ. ಕವಿಯ ರಚನೆಯನ್ನು ಕಾವ್ಯವೆಂದು, ಕವ್ಯ ರಚಿಸಿದವನನ್ನು ಕವಿಯೆಂದು ಕರೆಯಬಹುದು ಎಂಬ ಒಂದು ಮಾತು ಅರ್ಥವಾಗಬಹುದು. ಅಷ್ಟೇ. ಅದು ಇಡಿಯಾಗಿ ಕಾವ್ಯ ಎನ್ನುವುದರ ಬಗೆಗಿನ ವ್ಯಾಖ್ಯಾನವಲ್ಲ. ಕಾವ್ಯದ ಅರ್ಥವನ್ನು ಹುಡುಕುವುದು ಮೀಮಾಂಸೆಯ ಮೂಲಭೂತ ಪ್ರಶ್ನೆಗಳಲಿ ಒಂದಾಗಿದೆ. ಮನುಷ್ಯನ ನಾಗರಿಕತೆಯ ಸಂಸ್ಕೃತಿಯ ಮಹತ್ವದ ಅನ್ವೇಷಣೆಗಳು ನಡೆದಿದ್ದರೂ, ಅದು ಒಂದು ಹಂತಕ್ಕೆ ರಹಸ್ಯವಾಗಿಯೇ ಉಳಿದಿವೆ.

ಆಧುನಿಕ ಸಾಹಿತ್ಯ ಎಂದು ನಾವು ಕರೆಯುವ ಸಾಹಿತ್ಯ ಸೃಷ್ಠಿ ಕಳೆದ ಸುಮಾರು ಎಂಬತ್ತು ವರ್ಷಗಳದು. 1921 ರಲ್ಲಿ ಪ್ರೋ. ಬಿ.ಎಂ.ಶ್ರೀ. ಅವರ 'ಇಂಗ್ಲೀಷ್ ಗೀತೆಗಳು' ಪ್ರಕಟವಾಯಿತು. ಇಲ್ಲಿಗೆ ಆಧುನಿಕ ಸಾಹಿತ್ಯದ ಹೆದ್ದಾರಿ ತೆರೆಯಿತು ಎನ್ನಬಹುದು. 'ಇಂಗ್ಲೀಷ್ ಗೀತೆಗಳು' ಹನ್ನೆರಡು ಇಂಗ್ಲೀಷ್ ಕವನಗಳ ಅನುವಾದದ ಸಂಗ್ರಹ.

ಈ ಹೊತ್ತಿಗಾಗಲೆ ಆಧುನಿಕ ಸಾಹಿತ್ಯದ ಅರುಣೋದಯವು ಮುದ್ದಣ್ಣನ 'ರಾಮೇಶ್ವಮೇಧ', ಎಂ. ಎಸ್. ಪುಟ್ಟಣ್ಣನವರ ಕಾದಂಬರಿ 'ಮಡಿದ್ದುಣ್ಣೋ ಮಹಾರಾಯ', ಉತ್ತರ ಕನ್ನಡ ಜಿಲ್ಲೆಯಲ್ಲಿ ರಚಿತವಾದುದೆಂದು ಹೇಳಲಾದ 'ಇಗ್ಗಪ್ಪ ಹೆಗ್ಗಡೆ\ ಪ್ರಹಸನ ಮೊದಲದ ಕೃತಿಗಳಲಿ ಕಂಡಿತ್ತು. ಆದರೆ 'ಇಂಗ್ಲೀಷ್ ಗೀತೆಗಳ' ಮನೊಧರ್ಮ, ಅದರ ಪ್ರಯೋಗಶಿಲತ್ವ, ಅದರ ಪ್ರಭಾವ ಇವನ್ನು ಪರಿಗಣಿಸಿದಾಗ ಆಧುನಿಕ ಕನ್ನಡ ಸಾಹಿತ್ಯ ಈ ಕೃತಿಯಲ್ಲಿ ತನ್ನ ಉದಯವನ್ನು ಸಾರಿ ಹೇಳಿತು ಎಂದು ಹೇಳಬೇಕು.

ಸಾಹಿತ್ಯ ಮತ್ತು ಜೀವನಕ್ಕೆ ಇರಬಹುದಾದ ಸಂಬಧಗಳು, ಪರಸ್ಪರ ಸಾಧ್ಯತೆಗಳು, ಇಲ್ಲಿಂದಲೆ ಹೊಸತೆಂಬಂತೆ ತೆರೆದುಕೊಂಡವು ಅದುವರೆಗೆ ಸಾಹಿತ್ಯ/ಕಾವ್ಯ ಎನ್ನುವ ಅರಿವಿಗೆ ಸಂಬಂಧಿಸಿದಂತೆ ಭಾರತೀಯರಿಗೆ ಇದ್ದ ಗ್ರಹಿಕೆಗಳು ಪರಿಮಿತಿಯವೇ ಆಗಿದ್ದವು. ತಮ್ಮ ಬದುಕು, ತಮ್ಮ ಪರಿಸರ, ತಮ್ಮ ನೋಟ, ಭಾವವೇದನೆಗಳೆಲ್ಲವೂ ಕಾವ್ಯಗಳಾಗಬಹುದಾದವು ಎನ್ನುವುದು ಮೊದಲಿಗೆ ಅಚ್ಚರಿಯ ಲೋಕದಂತೆ ಭಾರತೀಯರಿಗೆ ಕಾಣತೊಡಗಿದವು. ಪ್ರಾಚೀನತೆ ಹೇಗೋ, ಚರಿತ್ರೆ ಹೇಗೋ, ಹಾಗೆಯೇ ವರ್ತಮಾನ, ಸಮಕಾಲಿನತೆ ಎಲ್ಲವೂ ಕವಿಯನ್ನು ಕಾವ್ಯಕ್ರಿಯೆಗೆ ಪ್ರೇರಿಪಸಬಲ್ಲವು ಎನ್ನುವುದೇ ಮಹತ್ವದ ವಸ್ತುಕ್ರಾಂತಿಯ ಸ್ವರೂಪವಾಗಿತ್ತು.

್ರಭಾವದಿಂದಾಗಿ ಇಂದು ಯುವಜನಾಂಗದ ಆಲೋಚನಾ ಶಕ್ತಿ ಭಿನ್ನವಾಗಿದೆ. ದೇಸಿ ಸಂಸ್ಕೃತಿಯ ಆಲೋಚನೆ ಮತ್ತು ಜಾಗತೀಕರಣದ ಆಲೋಚನೆಯ ತದ್ವಿರುದ್ಧವಾಗಿ ಸಮಾಜ ಮತ್ತು ವ್ಯಕ್ತಿಯಲಿ ಕಂಡುಬರುತ್ತದೆ. ಹೀಗಾಗಿ ಜಾಗತೀಕರಣ ಮತ್ತು ದೇಸಿ ಸಂಸ್ಕೃತಿಯಲ್ಲಿ ಸಂಘರ್ಷ ಅನಿವಾರ್ಯವಾಗಿ ಪರಿಣಮಿಸಿದೆ. ಹೀಗೆ 'ತೇರು' ಕಾದಂಬರಿಯಲ್ಲಿ ಪರಂಪರೆ ಮತ್ತು ಆಧುನಿಕತೆಯಲ್ಲಿ ಸಂಘರ್ಷವೇರ್ಪಡುವುದು. ರಾಘವೇಂದ್ರ ಪಾಟೀಲರು ಕಾದಂಬರಿಯಲ್ಲಿ ಇಂದಿನ ಯುವಪೀಳಿಗೆಯ ಮನೋಭಾವವನ್ನು ಗಮನದಲ್ಲಿಟ್ಟುಕೊಂಡು ಈ ಕಾದಂಬರಿಯ ಕಥೆಯನ್ನು ನಿರೂಪಿಸಿದ್ದಾರೆ.

ಅಡಿ ಟಿಪ್ಪಣಿಗಳು

1. (ನ. ರವಿಕುಮಾರ (ಸಂ) "ದೇಶಿ ದರ್ಶನಗಳು" ಮುನ್ನುಡಿ.
2. ರಾಘವೇಂದ್ರ ಪಾಟೀಲ 'ತೇರು' ಪುಟ–23
3. ಅದೇ ಪುಟ–23–24
4. ರಾಘವೇಂದ್ರ ಪಾಟೀಲ 'ತೇರು' ಪುಟ–24
5. ರಾಘವೇಂದ್ರ ಪಾಟೀಲ, 'ತೇರು' ಪುಟ– 25–26